ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆ

**ಕರ್ನಾಟಕ ವಿಧಾನ ಪರಿಷತ್ತು**

ನೂರ ನಲವತ್ತಮೂರನೆಯ ಅಧಿವೇಶನ

ಗುರುವಾರ, ದಿನಾಂಕ: 4ನೇ ಫೆಬ್ರುವರಿ, 2021

ನೂತನ ಪಿಂಚಣಿ ಕುರಿತು (ಗೆಜೆಟೆಡ್ ಆಫೀಸರ್ಸ್)

ಶ್ರೀಮತಿ ಭಾರತಿ ಶೆಟ್ಟಿ (ನಾಮನಿರ್ದೇಶನ) :-

342(467) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) 1998ನೇ ಸಾಲಿನ ಗೆಜೆಟೆಡ್ ಪ್ರೊಬೇಷನರ್ ಹುದ್ದೆಗಳಿಗೆ ಆಯ್ಕೆಯಾದವರಿಗೆ 2006 ಏಪ್ರಿಲ್‌ನಲ್ಲಿ ಹಾಗೂ ನಂತರದಲ್ಲಿ ಸೇರ್ಪಡೆ ಆದೇಶ ಪಡೆದವರನ್ನು ನೂತನ ಪಿಂಚಣಿ ಯೋಜನೆಗೆ ಸೇರ್ಪಡಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಬಂದಿದ್ದಲ್ಲಿ, ಕೇಂದ್ರ ಸರ್ಕಾರ ಈ ರೀತಿಯ ಪ್ರಕರಣಗಳಿಗೆ ವಿನಾಯಿತಿ ನೀಡಿ, ಹಳೆ ಪಿಂಚಣಿ ವ್ಯವಸ್ಥೆಗೆ ಅರ್ಹತೆ ನೀಡಿರುವ ಬಗ್ಗೆ Official Memorandumಹೊರಡಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಹಾಗಿದ್ದಲ್ಲಿ, ಈ ಬಗ್ಗೆ ಸರ್ಕಾರದ ಕ್ರಮಗಳೇನು ;

(ಇ) ಇಲ್ಲದಿದ್ದಲ್ಲಿ, ಈ ಕುರಿತು ಸದರಿ ಅಧಿಕಾರಿಗಳು ನೀಡಿರುವ ಮನವಿಗಳ ಬಗ್ಗೆ ಸರ್ಕಾರ ಎಷ್ಟು ದಿನಗಳಲ್ಲಿ ಹಳೆಯ ಪಿಂಚಣಿ ಯೋಜನೆಗೆ ಅರ್ಹತೆಯನ್ನು ಪರಿಗಣಿಸುವ ಬಗ್ಗೆ ಆದೇಶ ನೀಡುತ್ತದೆ ?